# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಸಿದ್ಧಾಪುರ ವಾರ್ಡ್–144 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀ. ನರಸಾರಾಮ್‌ರಾವ್ ಬಿ.ಎಲ್, ಮುಖ್ಯ ಅಭಿಯಂತರರು (ರಾಜರಾಜೇಶ್ವರಿನಗರ ವಲಯ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:31/12/2021 ರಂದು ಶುಕ್ರವಾರ ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಅಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಸಹಾಯಕ ಅಭಿಯಂತರರ ನೇತೃತ್ವದಲ್ಲಿ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀ. ಆರ್. ಕೊಟ್ರೇಶ್ ನಾಯಕ್, ಸಹಾಯಕ ಅಭಿಯಂತರರು, ವಾರ್ಡ್–144.
2. ಶ್ರೀ. ಜಿ. ಮೂರ್ತಿ ಸಹಾಯಕ ಅಭಿಯಂತರರು (ವಿದ್ಯುತ್ ಬಿಬಿಎಂಪಿ).
3. ಸಹಾಯಕ ಅಭಿಯಂತರರು ಯೋಜನೆ–ಕೇಂದ್ರ.
4. ಶ್ರೀ. ರವೀಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
5. ಶ್ರೀಮತಿ. ಭೂದೇವಿ, ತೋಟಗಾರಿಕೆ ಇಲಾಖೆ.
6. ಶ್ರೀಮತಿ. ಸುರೇಖ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 144.
7. ಹಾಗೂ ಸಾರ್ವಜನಿಕರು.

*********

1. ಶ್ರೀ. ಜಯರಾಮ್ ರವರು ಮಾತನಾಡಿ ಮಲ್ಲಿಗೆ ಆಸ್ಪತ್ರೆ ಹತ್ತಿರ ಸಾರ್ವಜನಿಕರ ಶೌಚಾಲಯ ನಿರ್ಮಿಸಲು ಹಾಗೂ ವಾರ್ಡಿನ ಮೂರು ಭಾಗದಲ್ಲಿ ಸಿ.ಸಿ. ಟಿ.ವಿ ಅಳವಡಿಸಲು ಕೋರಿದ್ದು, ಇದರನ್ವಯ ವಾರ್ಡಿನ ಸಹಾಯಕ ಅಭಿಯಂತರರು ಮುಂದಿನ ಅನುದಾನ ಬಂದಲ್ಲಿ ನಿಗಧಿತ ಸಮಯದಲ್ಲಿ ಅಂದಾಜು ಪಟ್ಟಿಯನ್ನು ಸಲ್ಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.
2. ಶ್ರೀ. ಜಯರಾಮ್ ರವರು ಮಾತನಾಡಿ ಮಲ್ಲಿಗೆ ಆಸ್ಪತ್ರೆಯನ್ನು 99 ವರ್ಷಕ್ಕೆ ಗುತ್ತಿಗೆ ನೀಡಿರುವ ದಾಖಲೆಗಳನ್ನು ನೀಡಲು ಕೋರಿದರು. ಇದರನ್ವಯ ವಾರ್ಡಿನ ಕಂದಾಯ ಪರಿವೀಕ್ಷಕರಾದ ಶ್ರೀ. ಎಂ.ಎಂ. ಬಾಬು ರವರು ಮಲ್ಲಿಗೆ ಆಸ್ಪತ್ರೆಯು ಮಹಾಬೋದಿ ಸಂಸ್ಥೆಗೆ 99 ವರ್ಷಕ್ಕೆ ಗುತ್ತಿಗೆ ನೀಡಿರುವುದು ನಿಜವೆಂದು ತಿಳಿಸಿದ್ದು, ದಾಖಲೆಗಳು ಮೇಲಾಧಿಕಾರಿಗಳ ಕಛೇರಿಯಲ್ಲಿದೆ ಎಂದು ತಿಳಿಸಿದರು.



Scanned with CamScanner

3. ಶ್ರೀ. ಜಯರಾಮ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಹಾಕಿರುವ ನಾಮಫಲಕದಲ್ಲಿ ಆಗಿರುವ ಲೋಪವನ್ನು ಸರಿಪಡಿಸಲು ತಿಳಿಸಿದರು. ಹಾಗೂ 6ನೇ ಅಡ್ಡರಸ್ತೆ ಗುಟ್ಟೇಪಾಳ್ಯ ರಸ್ತೆಯನ್ನು ಪ್ರಾರಂಭಿಸಲು ಕೋರಿದರು. ವಾರ್ಡಿನ ಸಹಾಯಕ ಅಭಿಯಂತರರು ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

4. ಶ್ರೀ. ಸುರೇಶ್ ಎಸ್.ಎಂ. ರವರು ಮಾತನಾಡಿ ಶ್ರೀ ಎಲ್ಲಮ್ಮ ದೇವಸ್ಥಾನದ ಹತ್ತಿರ ಇರುವ ತ್ರಿಕೋನಾಕೃತಿ ಪಾರ್ಕ್‌ಗಳನ್ನು ಸ್ವಚ್ಛಗೊಳಿಸಲು, ನಾಮಫಲಕವನ್ನು ಸರಿಪಡಿಸಲು ಹಾಗೂ ಪಾಲಿಕೆಯ ಜಾಗಗಳ ಬಗ್ಗೆ ಕ್ರಮ ವಹಿಸಲು ಹಿಂದಿನ ಸಭೆಯಲ್ಲಿ ಕೋರಿದ್ದ ಹಿನ್ನೆಲೆಯಲ್ಲಿ ಈ ಬಗ್ಗೆ ಕ್ರಮ ವಹಿಸಲಾಗಿರುತ್ತದೆ.

5. ಶ್ರೀ. ಸುರೇಶ್ ಹೆಚ್.ಕೆ. ರವರು ಮಾತನಾಡಿ ಸೋಮೇಶ್ವರನಗರ ಮುಖ್ಯರಸ್ತೆ, ಹೊಸೂರು ಮುಖ್ಯರಸ್ತೆ ಹಾಗೂ ಸಿದ್ಧಾಪುರ ಮುಖ್ಯರಸ್ತೆಯಲ್ಲಿ ಟ್ರಾಫಿಕ್ ಸೈನ್ ಬೋರ್ಡ್ ಅಳವಡಿಸಲು ಹಾಗೂ ಅನಧಿಕೃತವಾಗಿ ನಿಂತ ವಾಹನಗಳನ್ನು ತೆರವುಗೊಳಿಸಲು ಕೋರಿದರ ಹಿನ್ನೆಲೆಯಲ್ಲಿ ಸದರಿ ಸಭೆಯಲ್ಲಿ ಟ್ರಾಫಿಕ್ ಇಲಾಖೆಯವರು ಗೈರು ಹಾಜರಾಗಿದ್ದು, ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮವಹಿಸಲಾಗುವುದೆಂದು ವಾರ್ಡಿನ ಸಹಾಯಕ ಅಭಿಯಂತರು ತಿಳಿಸಿದರು. ಹಾಗೂ ಸೋಮೇಶ್ವರನಗರ ಮುಖ್ಯರಸ್ತೆಯಲ್ಲಿರುವ ಅರೆಕೆಂಪನಹಳ್ಳಿ 2ನೇ ಅಡ್ಡರಸ್ತೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಒಳಚರಂಡಿ ಕೊಳವೆಯನ್ನು ಅಳವಡಿಸಲು ರಸ್ತೆ ಕತ್ತರಿಸಿದ್ದು, ರಸ್ತೆಯನ್ನು ಯಥಾಸ್ಥಿತಿಗೆ ತರಲಾಗಿದೆ ಎಂದು ಅಭಿನಂದನೆ ಸಲ್ಲಿಸಿದರು.

6. ಶ್ರೀ. ತೇಜಸ್‌ಗೌಡ ರವರು ಮಾತನಾಡಿ ವಾರ್ಡಿನಲ್ಲಿ ನಕಲು ಗುರುತಿನ ಚೀಟಿಗಳು ಹೆಚ್ಚಾಗಿವೆ ಎಂದು ಆರೋಪಿಸಿದರು ಹಾಗೂ ವಾರ್ಡಿನಲ್ಲಿ ಲೌಡ್ ಸ್ಪೀಕರ್‌ಗಳನ್ನು ಅಳವಡಿಸದಂತೆ ಸಭೆಯಲ್ಲಿ ಮನವರಿಕೆ ಮಾಡಿದರು. ಇದರನ್ವಯ ಸಂಬಂಧಪಟ್ಟ ಸಿದ್ಧಾಪುರ ಪೊಲೀಸ್ ಠಾಣೆ ಅಧಿಕಾರಿಗಳು ಗೈರುಹಾಜರಾಗಿರುವುದರಿಂದ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ವಹಿಸಲು ತಿಳಿಸುವುದಾಗಿ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

7. ಶ್ರೀ. ಅಜ್ಮಲ್ ರವರು ಮಾತನಾಡಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು 6ನೇ ಅಡ್ಡರಸ್ತೆ, ಗುಟ್ಟೇಪಾಳ್ಯದಲ್ಲಿ ನೀರಿನ ಮತ್ತು ಒಳಚರಂಡಿಯ ಕೊಳವೆಗಳನ್ನು ಅಳವಡಿಸಲು ಕೋರಿದರು ಅದರಂತೆ ಶೀಘ್ರವಾಗಿ ಈ ಬಗ್ಗೆ ಕ್ರಮ ವಹಿಸಲು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಲಾಗುವುದೆಂದು ವಾರ್ಡಿನ ಅಭಿಯಂತರರು ಸಭೆಯಲ್ಲಿ ಹೇಳಿದರು.



Scanned with CamScanner

8. ಶ್ರೀ. ಟಿ. ಮಂಜುನಾಥ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿನ 6ನೇ ಅಡ್ಡರಸ್ತೆ ಅಗೆದಿರುವುದನ್ನು ಕೂಡಲೇ ಕಾಂಕ್ರಿಟ್ ಅಳವಡಿಸಿ ಸರಿಪಡಿಸಲು ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಮಾತನಾಡಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕೊಳವೆಗಳನ್ನು ಅಳವಡಿಸಿದ ನಂತರ ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

9. ಶ್ರೀ. ಅಶೋಕ್ ರವರು ಮಾತನಾಡಿ ವಾರ್ಡಿನ ಮುರಳಿ ಸ್ಲಂನಲ್ಲಿ ಪಾಲಿಕೆ ವತಿಯಿಂದ ನಿರ್ಮಿಸಿರುವ ಕಟ್ಟಡವನ್ನು (ಅಯ್ಯಪ್ಪ ದೇವಸ್ಥಾನ) ಸಾರ್ವಜನಿಕರ ಉದ್ದೇಶಕ್ಕಾಗಿ ಸಮುಧಾಯ ಭವನವನ್ನಾಗಿ ಉಪಯೋಗಿಸಲು ಮತ್ತೊಮ್ಮೆ ಸಭೆಯಲ್ಲಿ ಕೋರಿದರು. ಈ ಬಗ್ಗೆ ವಾರ್ಡಿನ ಸಹಾಯಕ ಅಭಿಯಂತರರು ಕೂಡಲೇ ಕ್ರಮ ವಹಿಸುವುದಾಗಿ ತಿಳಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕಾಗಿದ್ದು, ಸದರಿ ಸಭೆಯಲ್ಲಿ ಸಾರ್ವಜನಿಕರು ಪಕ್ಷಗಳ ಬಗ್ಗೆ, ಜಾತಿಗಳ ಬಗ್ಗೆ ಹಾಗೂ ಅವರವರ ವೈಯಕ್ತಿಕ ವಿಷಯಗಳ ಬಗ್ಗೆ ಒಬ್ಬರ ಇನ್ನೊಬ್ಬರ ಮೇಲೆ ದ್ವೇಷವನ್ನು ಸಾಧಿಸುತ್ತಿರುವುದು ಕಂಡು ಬಂದಿರುವುದರಿಂದ ಸಭೆಯನ್ನು ನಡೆಸಲು ಕಷ್ಟ ಸಾಧ್ಯವಾಗುತ್ತದೆ ಹಾಗೂ ಮುಂದೆ ಇಂತಹ ಸಭೆಗಳನ್ನು ನಡೆಸಲು ಸಾಧ್ಯವಿಲ್ಲ ಎಂಬ ವಿಷಯವನ್ನು ನೋಡಲ್ ಅಧಿಕಾರಿಯವರ ಗಮನಕ್ಕೆ ತಿಳಿಸಲಾಗುವುದೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

[signature] AE 31/12/21.

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner